# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್. ಸಿ. 110/2017

| | | |
|---|---|---|
| ಸಾಕ್ಷಿದಾರರ ಹೆಸರು | ಸೋಮಶೇಖರ್ ಆರ್. | ಪ್ರಮಾಣ ವಚನ ಮಾಡಿದ ದಿನಾಂಕ: 16.02.2026 |
| ತಂದೆಯ/ಗಂಡನ ಹೆಸರು | ಮಹದೇವು | |
| ವಯಸ್ಸು | 46 ವರ್ಷ | |
| ವೃತ್ತಿ | ಮುಖ್ಯ ಪೇದೆ, ವಿವಿಪುರಂ ಪೊಲೀಸ್ ಠಾಣೆ , ಮೈಸೂರು | ಪ್ರಾ.ಸಾಃ 42 |
| ವಾಸ ಸ್ಥಳ | ಮೈಸೂರು | ಚಾ.ಸಾಃ 54 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ವಿವಿಪುರಂ ಪೊಲೀಸ್ ಠಾಣೆಯಲ್ಲಿ *2016* ರಿಂದ *2020* ರವರೆಗೆ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೆನು. ನಂತರ *2023* ರಿಂದ ಇಲ್ಲಿಯವರೆಗೆ ವಿವಿಪುರಂ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ *24.12.2016* ರಂದು ವಿವಿಪುರಂ ಪೊಲೀಸ್ ಠಾಣಾ ಮೊ.ಸಂಖ್ಯೆ *142/2016* ರ ಪ್ರಕರಣದಲ್ಲಿ ಪಿ.ಎಸ್.ಐ ರಾಜು, ಹೆಚ್.ಸಿ *353* ಕೇಶವಮೂರ್ತಿ, ಪಿಸಿ *166* ಮಧುಸೂದನ್, ಪಿಸಿ *587* ಮಂಜುನಾಥ, ಎಪಿಸಿ *60* ಮಹೇಶ್ ರವರೊಂದಿಗೆ ನನ್ನನ್ನು ಆರೋಪಿತರನ್ನು ಪತ್ತೆ ಮಾಡಿ ಹಾಜರುಪಡಿಸುವ ಬಗ್ಗೆ ನೇಮಕ ಮಾಡಿತ್ತು. ಅದರಂತೆ ನಾವು ಠಾಣಾ ವ್ಯಾಪ್ತಿಯ ಸರಹದ್ದುಗಳಲ್ಲಿ ಗಸ್ತಿನಲ್ಲಿ ಇರುವಾಗ ಬಾತ್ಮಿದಾರರಿಂದ ಮಾಹಿತಿ ಬಂದ ಪ್ರಕಾರ

ಆರೋಪಿತರು ವಕೀಲರನ್ನು ಭೇಟಿ ಮಾಡಲು ಹೋಗುತ್ತಿರುವ ಬಗ್ಗೆ ಮಾಹಿತಿ ದೊರೆತಿದ್ದು ರಾತ್ರಿ *9.00* ಗಂಟೆ ಸಮಯದಲ್ಲಿ ಗೋಕುಲಂ *3* ನೇ ಹಂತ ಕಾಂಟೂರ್ ರಸ್ತೆ ಜಂಕ್ಷನ್ ಬಳಿ ಆರೋಪಿತರಾದ ಹೇಮಂತ, ಸಂಜು @ ಸ್ಯಾಮಸನ್, ಸಂದೇಶ, ಧರ್ಮೇಂದ್ರ ಮತ್ತು ಇನ್ನೊಬ್ಬ ಆರೋಪಿತರನ್ನು ವಶಕ್ಕೆ ಪಡೆದುಕೊಂಡು ರಾತ್ರಿ *9.15* ಗಂಟೆಗೆ ಪಿ.ಐ ರವರ ಮುಂದೆ ಹಾಜರುಪಡಿಸಿ ಪಿ.ಎಸ್.ಐ ರಾಜು ರವರು ವರದಿ ನೀಡಿದ್ದರು.

ದಿನಾಂಕ *27.12.2016* ರಂದು ಮತ್ತೊಬ್ಬ ಆರೋಪಿ ಕಾರ್ತಿಕ್ @ ತಿಮ್ಮಿ ಈತನನ್ನು ಪತ್ತೆ ಮಾಡಿ ಹಾಜರುಪಡಿಸುವಂತೆ ನೇಮಕ ಮಾಡಿದ್ದು ಈ ಬಗ್ಗೆ ಪೊಲೀಸ್ ಇನ್ಸ್ ಪೆಕ್ಟರ್ ರವರು ಜ್ಞಾಪನವನ್ನು ನೀಡಿದ್ದರು. ಸಾಕ್ಷಿದಾರರು ಜ್ಞಾಪನವನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.** *133* ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು **ನಿಪಿ.** *133(ಎ)* ಎಂದು ಗುರುತಿಸಲಾಯಿತು. ಆ ಪ್ರಕಾರ ಪಡುವಾರಹಳ್ಳಿ ಸಿಗ್ನಲ್ ಬಳಿ ಮಧ್ಯಾಹ್ನ *1.45* ಗಂಟೆಗೆ ವಶಕ್ಕೆ ಪಡೆದುಕೊಂಡು ಮಧ್ಯಾಹ್ನ *2.00* ಗಂಟೆಗೆ ಪಿ.ಐ ರವರ ಮುಂದೆ ಹಾಜರುಪಡಿಸಿ ವರದಿ ಯನ್ನು ನೀಡಿದ್ದೇನು. ಸಾಕ್ಷಿದಾರರು ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.***134* ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು **ನಿಪಿ.***134 (ಎ)* ಎಂದು ಗುರುತಿಸಲಾಯಿತು.

ದಿನಾಂಕ *09.01.2017* ರಂದು ಆರೋಪಿ ಭರತ್ ರವರನ್ನು ಪತ್ತೆ ಮಾಡಿ ಹಾಜರುಪಡಿಸುವಂತೆ ಪೊಲೀಸ್ ಇನ್ಸ್ ಪೆಕ್ಟರ್ ರವರು ಜ್ಞಾಪನವನ್ನು ನೀಡಿದ್ದರು. ಸಾಕ್ಷಿದಾರರು ಜ್ಞಾಪನವನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.** *135* ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು **ನಿಪಿ.** *135 (ಎ)* ಎಂದು ಗುರುತಿಸಲಾಯಿತು. ನಾನು ಆ ಪ್ರಕಾರ

ಆರೋಪಿತನ ಪತ್ತೆಯಲ್ಲಿ ಇದ್ದಾಗ ವಿಜಯನಗರ ಹಂಪಿ ವೃತ್ತದ ಬಳಿ ಭರತ್ ನನ್ನು ಬೆಳಗ್ಗೆ *9.45* ಗಂಟೆಗೆ ವಶಕ್ಕೆ ಪಡೆದುಕೊಂಡು *10.00* ಗಂಟೆಗೆ ಠಾಣೆಗೆ ಕರೆದುಕೊಂಡು ಬಂದು ಠಾಣೆಯ ಪೊಲೀಸ್ ನಿರೀಕ್ಷಕರ ಮುಂದೆ ಹಾಜರುಪಡಿಸಿ ವರದಿ ಯನ್ನು ನೀಡಿದ್ದೇನು. ಸಾಕ್ಷಿದಾರರು ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.** *136* ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು **ನಿಪಿ.***136* *(ಎ)* ಎಂದು ಗುರುತಿಸಲಾಯಿತು.

ನಾನು ಪಿ.ಐ ರವರು ಕೊಟ್ಟಿದ್ದ ಕಾಲ್ ಡಿಟೇಲ್ ಗಳನ್ನು ಅನಾಲಿಸೀಸ್ ಮಾಡಿ ಪಿ.ಐ ರವರಿಗೆ ಕೊಟ್ಟಿದ್ದೇನು. ನಾನು ಮತ್ತು ಇತರ ಸಿಬ್ಬಂದಿಯವರು ಆ ದಿನ ವಶಕ್ಕೆ ತೆಗೆದುಕೊಂಡು ಠಾಣೆಗೆ ಹಾಜರುಪಡಿಸಿದ್ದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಇರುವ *4* ರಿಂದ *6* ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಉಳಿದ ಆರೋಪಿತರು ನ್ಯಾಯಾಲಯಕ್ಕೆ ಗೈರು ಹಾಜರು ಇದ್ದು, ಆರೋಪಿತರ ಪರ ವಕೀಲರು ಆರೋಪಿತರ ಗುರುತಿನ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ ಆರೋಪಿ 1 ರಿಂದ 6 ಪರ ವಕೀಲರಿಂದ :**

ಆ ದಿನ ಠಾಣೆಯಿಂದ ಒಟ್ಟು 6 ಜನರು ಆರೋಪಿತರ ಪತ್ತೆಗಾಗಿ ಹೊರಟಿದ್ದೆವು. ನಾವುಗಳೆಲ್ಲರೂ ಆ ದಿನ ನಾವು ತಂದಿದ್ದ ದ್ವಿ ಚಕ್ರ ವಾಹನಗಳಲ್ಲಿ ಹೊರಟಿದ್ದೆವು. ಆ ದಿನ ನಮ್ಮನ್ನು ನೇಮಕ ಮಾಡಿದ್ದರ ಬಗ್ಗೆ ಪಿ.ಐ ರವರು ಠಾಣೆಯ ದಿನಚರಿಯಲ್ಲಿ ನಮೂದು ಮಾಡಿರುತ್ತಾರೆ. ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆ ದಿನ ನಾವು ಮಧ್ಯಾಹ್ನ 1.00 ಗಂಟೆ ಸಮಯಕ್ಕೆ ಠಾಣೆಯನ್ನು ಬಿಟ್ಟಿದ್ದೆವು. ಆ ದಿನ ನಾವು ಠಾಣೆಯನ್ನು ಬಿಡುವ

ಪೂರ್ವದಲ್ಲಿ ಲಿಖಿತವಾಗಿ ಆರೋಪಿತರ ಚಹರೆ ಬಗ್ಗೆ ಮಾಹಿತಿ ಕೊಟ್ಟಿರಲಿಲ್ಲ ಆದರೆ ಆರೋಪಿತರ ಹೆಸರುಗಳ ಬಗ್ಗೆ ಮಾಹಿತಿ ಕೊಟ್ಟಿದ್ದರು. ಆರೋಪಿತರನ್ನು ಹೆಸರುಗಳನ್ನು ಸಹ ಬರೆದುಕೊಟ್ಟಿರಲಿಲ್ಲ ಮೌಖಿಕವಾಗಿ ಹೇಳಿದ್ದರು. ಆರೋಪಿತರು ನನಗೆ ಮೊದಲು ಪರಿಚಯ ಇರಲಿಲ್ಲ. ಮಾಹಿತಿ ದಾರರು ನಮ್ಮ ಹಿರಿಯ ಅಧಿಕಾರಿ ಪ.ಎಸ್.ಐ ರಾಜುರವರಿಗೆ ಮಾಹಿತಿಯನ್ನು ಕೊಟ್ಟಿದ್ದರು. ಆ ದಿನ ನಾವುಗಳೆಲ್ಲರೂ ಒಟ್ಟಿಗೆ ಆರೋಪಿತರನ್ನು ಪತ್ತೆ ಮಾಡುತ್ತಿದ್ದೆವು. ಸಂಜೆ 6.00 ಗಂಟೆ ಸುಮಾರಿಗೆ ಆರೋಪಿತರ ಬಗ್ಗೆ ಖಚಿತ ಮಾಹಿತಿ ಸಿಕ್ಕಿತ್ತು. ಆ ರೀತಿ ಖಚಿತ ಮಾಹಿತಿ ಸಿಕ್ಕ ಮೇಲೆ ಪಿ.ಎಸ್.ಐ ರಾಜು ರವರು ನಮಗೆ ಮಾಹಿತಿ ಬಗ್ಗೆ ತಿಳಿಸಿದ್ದರು. ಮಾಹಿತಿ ಸಿಗುವ ಪೂರ್ವದಲ್ಲಿ ಆರೋಪಿತರ ಮನೆಗೆ ಭೇಟಿ ಕೊಟ್ಟಿರಲಿಲ್ಲ. ಆರೋಪಿತರ ಹೆಸರುಗಳನ್ನು ಮಾತ್ರ ತಿಳಿಸಿತ್ತು ಅವರ ತಂದೆ ಮತ್ತು ವಿಳಾಸವನ್ನು ತಿಳಿಸಿರಲಿಲ್ಲ. ಮನೆಗಳಲ್ಲಿ ಇದ್ದಂತಹ ಆರೋಪಿತರನ್ನು ಕರೆದುಕೊಂಡು ಬಂದು ನಾವು ಹೇಳಿದ ಸ್ಥಳ ಗಳಲ್ಲಿ ಇದ್ದರು ಆ ಸ್ಥಳ ಗಳಿಂದ ಕರೆದುಕೊಂಡು ಬಂದಿದ್ದೇವೆ ಎಂದು ಸುಳ್ಳು ವರದಿ ನೀಡಿದ್ದೇವೆ ಎಂದರೆ ಸರಿಯಲ್ಲ.

ನಾನು ಆರೋಪಿ 1 ರಿಂದ 6 ರವರನ್ನು ನಿಪಿ-133 ರಿಂದ 136 ರವರೆಗೆ ಹೇಳಿದಂತಹ ಸ್ಥಳ ಗಳಲ್ಲಿ ವಶಕ್ಕೆ ಪಡೆದುಕೊಂಡು ಹಾಜರುಪಡಿಸಿ ವರದಿ ನೀಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು ಆ ದಿನ ಆರೋಪಿತರ ಪತ್ತೆಗಾಗಿ ನೇಮಿಸಿರಲಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರ ಕಾಲ್ ಡಿಟೇಲ್ ಗಳನ್ನು

ಅನಾಲಿಸಿಸ್ ಮಾಡಿ ಕೊಟ್ಟಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ನ್ಯಾಯಾಲಯದ ಮುಂದೆ ಇರುವಂತಹ ದಾಖಲೆಗಳಲ್ಲಿ ಆ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಅವರ ವಕೀಲರನ್ನು ಭೇಟಿಯಾಗಲು ಹೋಗುತ್ತಿದ್ದಾರೆ ಎಂದು ಬಂದ ಖಚಿತ ಮಾಹಿತಿ ಮೇರೆಗೆ ಆರೋಪಿತರನ್ನು ವಶಕ್ಕೆ ಪಡೆದುಕೊಂಡು ಠಾಣೆಯಲ್ಲಿ ಹಾಜರುಪಡಿಸಿ ವರದಿ ನೀಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸ್ ಇನ್ಸ್ ಪೆಕ್ಟರ್ ರವರು ಮೌಖಿಕವಾಗಿ ಆರೋಪಿತರ ಹೆಸರುಗಳನ್ನು ತಿಳಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ 7 ರಿಂದ 12 ಪರ ವಕೀಲರಿಂದ :**

ಆರೋಪಿ 7 ರಿಂದ 12 ರ ಪರ ವಕೀಲರು ಆರೋಪಿ 1 ರಿಂದ 6 ಪರ ವಕೀಲರು ಮಾಡಿದಂತಹ ಪಾಟೀ ಸವಾಲಿನಂತೆಯೇ ತನ್ನ ಪಾಟೀ ಸವಾಲು ಇರುತ್ತದೆ ಎಂದು ಹೇಳಿರುತ್ತಾರೆ.

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**